# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 01 ಎಸಿಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:27.06.2022

## ಅಧಿಸೂಚನೆ

**ವಿಷಯ:–** ದಿನಾಂಕ:01.01.2021 ರಿಂದ 31.12.2021ರ ಅವಧಿಗೆ ದಿನಾಂಕ:01.01.2022ರಲ್ಲಿದ್ದಂತೆ, ಕರ್ನಾಟಕ ಸರ್ಕಾರ ಸಚಿವಾಲಯದ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಅಂತಿಮ ಜ್ಯೇಷ್ಠತಾಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:–**
1. ಅಧಿಸೂಚನೆ ಸಂಖ್ಯೆ: ಸಿಆಸುಇ 36 ಆಕೋಜೇ 2016, ದಿನಾಂಕ:18.11.2016.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 182 ಎಸ್‌ಆರ್‌ಆರ್ 2011, ದಿನಾಂಕ:06.05.2017.
3. ಅಧಿಸೂಚನೆ ಸಂಖ್ಯೆ: ಸಿಆಸುಇ 34 ಆಕೋಜೇ 2017, ದಿನಾಂಕ: 22.12.2017.
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ:27.02.2019
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ:15.05.2019.
6. ಅಧಿಸೂಚನೆ ಸಂಖ್ಯೆ: ಸಿಆಸುಇ 09 ಆಕೋಜೇ 2019, ದಿನಾಂಕ:08.08.2019.
7. ಅಧಿಸೂಚನೆ ಸಂಖ್ಯೆ: ಸಿಆಸುಇ 14 ಎಸಿಎಸ್ 2020, ದಿನಾಂಕ:17.11.2020.
8. ಅಧಿಸೂಚನೆ ಸಂಖ್ಯೆ: ಸಿಆಸುಇ 09 ಎಸಿಎಸ್ 2021, ದಿನಾಂಕ:15.07.2021.
9. ಅಧಿಸೂಚನೆ ಸಂಖ್ಯೆ: ಸಿಆಸುಇ 01 ಎಸಿಎಸ್ 2022, ದಿನಾಂಕ:08.03.2022.

*****

ಉಲ್ಲೇಖ(1)ರ ಅಧಿಸೂಚನೆಯಲ್ಲಿ ದಿನಾಂಕ:03.03.2015 ರಿಂದ ದಿನಾಂಕ:31.12.2016ರವರೆಗೆ ಪ್ರಕಟಗೊಂಡ ಕರ್ನಾಟಕ ಸರ್ಕಾರ ಸಚಿವಾಲಯದ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಜ್ಯೇಷ್ಠತಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿ:09.02.2017ರಂದು ನೀಡಿರುವ ತೀರ್ಪಿನ ಮೇರೆಗೆ ಉಲ್ಲೇಖ(2)ರ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ, ಪರಿಷ್ಕೃತ ಜ್ಯೇಷ್ಠತಾಪಟ್ಟಿಯನ್ನು ಹೊರಡಿಸುವ ನಿಟ್ಟಿನಲ್ಲಿ, ಪ್ರಕಟಿಸಲಾಗಿರುವ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಜ್ಯೇಷ್ಠತಾಪಟ್ಟಿಯಲ್ಲಿ ಪದೋನ್ನತಿ ಪಡೆದ ಅಧಿಕಾರಿಗಳ ಜ್ಯೇಷ್ಠತೆಯನ್ನು ಪುನರಾವಲೋಕಿಸಿ, ಅವರ ಜ್ಯೇಷ್ಠತೆಯನ್ನು ದಿ:03.03.2015 ರಿಂದ 31.12.2016 ರವರೆಗೆ ನಿಗದಿಪಡಿಸಿ, ದಿನಾಂಕ:01.01.2017ರಲ್ಲಿದ್ದಂತೆ ಪರಿಷ್ಕೃತ ಅಂತಿಮ ಜ್ಯೇಷ್ಠತಾಪಟ್ಟಿಯನ್ನು ಉಲ್ಲೇಖ(3)ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿತ್ತು.

ತದನಂತರ, ಉಲ್ಲೇಖ(4) ಮತ್ತು (5)ರ ಸರ್ಕಾರದ ಆದೇಶದಲ್ಲಿನ ಸೂಚನೆಗಳನುಸಾರ ಕರ್ನಾಟಕ ರಾಜ್ಯದ (ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜ್ಯೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಪ್ರಕರಣ 3 ಮತ್ತು 4ನ್ನು ಅದರ ಪ್ರಕರಣ 5 ರೊಂದಿಗೆ ಸಹವಾಚನ ಮಾಡಿಕೊಂಡಂತೆ ದಿನಾಂಕ:27.04.1978ರಿಂದ ಮೀಸಲಾತಿಯನ್ವಯ ನೀಡಲಾದ ಪದೋನ್ನತಿಗಳನ್ನು ನಿರ್ಧರಿಸಿ, ದಿನಾಂಕ:27.04.1978 ರಿಂದ 31.12.2018ರವರೆಗಿನ ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಜ್ಯೇಷ್ಠತಾಪಟ್ಟಿಯನ್ನು ಪುನರಾವಲೋಕಿಸಿ, ದಿನಾಂಕ: 01.01.2019ರಲ್ಲಿದ್ದಂತೆ, ಪರಿಷ್ಕೃತ ಅಂತಿಮ ಜ್ಯೇಷ್ಠತಾಪಟ್ಟಿಯನ್ನು ಉಲ್ಲೇಖ(6)ರ ಅಧಿಸೂಚನೆಯಲ್ಲಿ ಮುಂದುವರೆದು ದಿನಾಂಕ:01.01.2020ರಲ್ಲಿದ್ದಂತೆ, ಉಲ್ಲೇಖ(7)ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ದಿನಾಂಕ:01.01.2021ರಲ್ಲಿದ್ದಂತೆ, ಉಲ್ಲೇಖ(8)ರ ಅಧಿಸೂಚನೆಯಲಿ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ನಿಯಮಾನುಸಾರ ಪ್ರಕಟಿಸಲಾಗಿದೆ.

ಪ್ರಸ್ತುತ ದಿನಾಂಕ:01.01.2021 ರಿಂದ 31.12.2021ರ ಅವಧಿಗೆ, ದಿನಾಂಕ:01.01.2022ರಲ್ಲಿ ಇದ್ದಂತೆ, ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸದರಿ ಜ್ಯೇಷ್ಠತಾ ಪಟ್ಟಿಯಲ್ಲಿ ನಿಗಧಿಪಡಿಸಿರುವ ಜ್ಯೇಷ್ಠತಾ ವಿಷಯಗಳ ಬಗ್ಗೆ ಆಕ್ಷೇಪಣೆಗಳನ್ನು ಹಾಗೂ ಜ್ಯೇಷ್ಠತಾ ಪಟ್ಟಿಯಲ್ಲಿ ಅಧಿಕಾರಿಯ ಹೆಸರು, ಪ್ರವರ್ಗ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಮುಂಬಡ್ತಿ ಪಡೆದ ದಿನಾಂಕಗಳಲ್ಲಿ ಬೆರಳಚ್ಚು ದೋಷಗಳಿದ್ದಲ್ಲಿ ಅವುಗಳನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಮನವಿಯನ್ನು ಸಲ್ಲಿಸಲು ಉಲ್ಲೇಖ(9)ರಲ್ಲಿ 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು. ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಪಟ್ಟಿಯನ್ನು ಅಂತಿಮಗೊಳಿಸಿದೆ.

ದಿನಾಂಕ:01.01.2021 ರಿಂದ 31.12.2021ರ ಅವಧಿಗೆ, ದಿನಾಂಕ:01.01.2022ರಲ್ಲಿದ್ದಂತೆ, ಸರ್ಕಾರದ ವಿಶೇಷ ಕಾರ್ಯದರ್ಶಿ ವೃಂದದ ಅಂತಿಮ ಜ್ಯೇಷ್ಠತಾಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ವೃಂದಕ್ಕೆ ನೀಡಲಾದ ಮುಂಬಡ್ತಿ ವಿವರಗಳನ್ನು **ಅನುಬಂಧ-1ರಲ್ಲಿ,** ಹಾಗೂ ಅಂತಿಮ ಜ್ಯೇಷ್ಠತಾಪಟ್ಟಿಯನ್ನು **ಅನುಬಂಧ-2**ರಲ್ಲಿ ಇದರೊಂದಿಗೆ ಲಗತ್ತಿಸಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Nagaratna C
27/6/22

(ಸಿ. ನಾಗರತ್ನ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ. & ಆ.ಸು.ಇಲಾಖೆ (ಆಡಳಿತ ಕೋಶ)

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು / ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳ ಆಪ್ತ ಶಾಖೆ
2. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಇಲಾಖೆಯ ಸಮನ್ವಯ ಅಧಿಕಾರಿಗಳಿಗೆ
3. ಸಂಬಂಧಪಟ್ಟ ಅಧಿಕಾರಿಗಳು
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಕಡತ

**ವೆಬ್‌ಸೈಟ್:-https://dpar.karnataka.gov.in/->Administration Cell (ಆಡಳಿತ ಕೋಶ)**

## ಅನುಬಂಧ – 1

**ದಿನಾಂಕ: 03.03.2015 ರಿಂದ 31.12.2021ರ ಅವಧಿಯಲ್ಲಿ ಸರ್ಕಾರದ ವಿಶೇಷ ಕಾರ್ಯದರ್ಶಿಗಳ ವೃಂದಕ್ಕೆ ನೀಡಲಾದ ಮುಂಬಡ್ತಿ ವಿವರಗಳು**

| ಕ್ರ ಸಂ. | ಅಧಿಸೂಚನೆ ಸಂಖ್ಯೆ | ದಿನಾಂಕ | ಮುಂಬಡ್ತಿ ಪಡೆದವರ ಸಂಖ್ಯೆ | ಷರಾ |
|---|---|---|---|---|
| (1) | (2) | (3) | (4) | (5) |
| 1 | ಸಿಆಸುಇ 271 ಸಉಸೇ 2014 | 03.03.2015 | 1 | |
| 2 | ಸಿಆಸುಇ 119 ಸಉಸೇ 2015 | 22.04.2015 | 1 | |
| 3 | ಸಿಆಸುಇ 300 ಸಉಸೇ 2016 | 23.12.2016 | 2 | |
| 4 | ಸಿಆಸುಇ 142 ಸಉಸೇ 2018 | 31.05.2018 | 2 | |
| 5 | ಸಿಆಸುಇ 43 ಸಉಸೇ 2019 | 31.07.2019 | 3–1=2 | |
| 6 | ಸಿಆಸುಇ 233 ಸಉಸೇ 2020 | 03.07.2020 | 1 | |
| 7 | ಸಿಆಸುಇ 143 ಸಉಸೇ 2021 | 30.06.2021 | 2 | |

Nagarathna C.
27/6/22

(ಸಿ. ನಾಗರತ್ನ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ. & ಆ.ಸು.ಇಲಾಖೆ (ಆಡಳಿತ ಕೋಶ).

ಅನುಬಂಧ–2

ದಿನಾಂಕ:01.01.2021 ರಿಂದ 31.12.2021ರ ಅವಧಿಗೆ ದಿನಾಂಕ:01.01.2022ರಲ್ಲಿದ್ದಂತೆ ಕರ್ನಾಟಕ ಸರ್ಕಾರ ಸಚಿವಾಲಯದ ವಿಶೇಷ ಕಾರ್ಯದರ್ಶಿ ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿ

| ಕ್ರ.ಸಂ | ಹಿಂದಿನ ಜ್ಯೇಷ್ಠತಾ ಪಟ್ಟಿಯಲ್ಲಿನ ಕ್ರ.ಸಂ. | ಹೆಸರು | ಪ್ರವರ್ಗ | ಪೋಷಕ ವೃಂದದ ಜೇಷ್ಠತಾ ಕ್ರ.ಸಂ. | ಹುಟ್ಟಿದ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ವಿಶೇಷ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ಪಡೆದ ದಿನಾಂಕ | ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| - | - | ವೆಂಕಟರಸಪ್ಪ .ಎಂ | ಪ.ಜಾ | 33/2019 | 10.06.1960 | 16.06.1984 | 31.07.2019 | 31.05.2018 | ವಯೋನಿವೃತ್ತಿ |
| - | 1 | ಜಗನ್ನಾತ .ಎನ್.ಆರ್ | ಪ.ಜಾ | 34/2019 | 07.05.1961 | 14.06.1984 | 31.07.2019 | 31.07.2019 | –"– |
| 1 | 2 | ಪದ್ಮಾವತಿ | ಪ.ಜಾ | 35/2019 | 10.05.1962 | 14.06.1984 | 31.07.2019 | 31.07.2019 | |
| 2 | 3 | ಆರ್.ಲೀಲಾವತಿ | ಪ.ಜಾ | 37/2019 | 09.09.1963 | 15.06.1984 | 03.07.2020 | 03.07.2020 | |
| 3 | - | ಪರಂಧಾಮಯ್ಯ | ಪ.ಜಾ | 2/2021 | 30.05.1962 | 03.06.1981 | 30.06.2021 | 30.06.2021 | ಅಧಿಸೂಚನೆ ಸಂಖ್ಯೆ:ಸಿಆಸುಇ 143 ಸಲುಸೇ 2021 ದಿನಾಂಕ:30.06.2021 |
| - | - | ನಿಜಪ್ಪ ವೈ.ಸಾಗರ್ | ಪ.ಜಾ | 3/2021 | 25.06.1961 | 19.06.1984 | 30.06.2021 | 30.06.2021 | ಅಧಿಸೂಚನೆ ಸಂಖ್ಯೆ:ಸಿಆಸುಇ 143 ಸಲುಸೇ 2021 ದಿನಾಂಕ:30.06.2021 / ವಯೋನಿವೃತ್ತಿ |

Nagarathna C. 27/6/22

(ಸಿ.ನಾಗರತ್ನ)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇ (ಆಡಳಿತ ಕೋಶ).